Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 37 | 6th March 2025

## ಮಹಾಕುಂಭಮೇಳ

ಭಾಗವಹಿಸಿದ ಸದಸ್ಯರ ಅನಿಸಿಕೆಗಳು

Time : 7.00 p.m.
Venue : Hotel Shivaprasad Grand, Kundapura



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

39th year of Service and Fellowship

We meet every Thursday at 7-30 p.m. at Sarojini Madhusoodhan D. Kushe Rotary South Hall, Kundapura

## ವಾರದ ವರದಿ




ತಾ. 27–02–2025ರ ನಮ್ಮ ಸಾಪ್ತಾಹಿಕ ಸಭೆಯು ಹೋಟೆಲ್ ಶಿವಪ್ರಸಾದ್ ಗ್ರ್ಯಾಂಡ್‌ನ ಕ್ರಿಸ್ಟಲ್ ಸಭಾಂಗಣದಲ್ಲಿ ನಡೆಯಿತು. ತಾ. 23–02–2025ರಂದು ನಮ್ಮ ಕ್ಲಬ್ಬಿನ ಆಶ್ರಯದಲ್ಲಿ ಯಶಸ್ವಿಯಾಗಿ ನಡೆದ ವಲಯ ಮಟ್ಟದ World Understanding and Peace Day ಯ ಯಶಸ್ಸಿನ ತುಣುಕುಗಳನ್ನು ಮೆಲುಕು ಹಾಕಲು ಆಯೋಜಿಸಲಾಗಿತ್ತು. ಅಂದಿನ ಸಭೆಯ ರೂವಾರಿಯಾದ ವಲಯ ಸೇನಾನಿ ರೊ. ಮಹೇಂದ್ರ ಶೆಟ್ಟಿಯವರನ್ನು ವೇದಿಕೆಗೆ ಆಹ್ವಾನಿಸಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಅವರನ್ನು ಮತ್ತು ಆಗಮಿಸಿದ ಸರ್ವ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯ ನಂತರ ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಕಳೆದ ವಾರದ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ವಾರದ ಚಿಂತನೆಯನ್ನು ನೀಡಿದ ರೊ. ದೋಮ ಚಂದ್ರಶೇಖರ್‌ರವರು ಪ್ರೀತಿ ಮತ್ತು ಸ್ನೇಹತ್ವಕ್ಕಾಗಿ ಸ್ಥಾಪಿಸಲ್ಪಟ್ಟ ರೋಟರಿಗೆ ಕವಿ ಶ್ರೀ ಶಿವರುದ್ರಪ್ಪನವರು ಬರೆದ ಸೂಕ್ತಿಯನ್ನು ಹೋಲಿಸುತ್ತಾ "ನಮ್ಮ ಕುಟುಂಬಗಳಲ್ಲಿ ಅಥವಾ ಸ್ನೇಹಿತರಲ್ಲಿ ಇರುವ ಸ್ನೇಹತ್ವವನ್ನು ಗುರುತಿಸದೇ, ಗುಡಿಗಳಲ್ಲಿ ಇಲ್ಲದ ದೇವರನ್ನು ಹುಡುಕುತ್ತಾ ಹೋಗುವುದು ಸೂಕ್ತವಲ್ಲ" ಎಂದರು. ವಾರದ ಚಿಂತನೆಯನ್ನು ನೀಡಿದ ರೊ. ಕೆ. ಕೆ. ಕಾಂಚನ್‌ರವರು Dist. Eventಗಳಲ್ಲಿ compulsoryಯಾಗಿ ಆಚರಿಸಲೇ ಬೇಕಾದ 6 ಕಾರ್ಯಕ್ರಮಗಳ ವಿವರವನ್ನು ನೀಡಿದರು. ನಂತರ ಸದಸ್ಯರು ಒಬ್ಬೊಬ್ಬರಾಗಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

**ರೊ. ಕೆ. ಕೆ. ಕಾಂಚನ್ :** ಇಂದು ಪ್ರಪಂಚದ 36,000ಕ್ಕೂ ಅಧಿಕ ಕ್ಲಬ್‌ಗಳಲ್ಲಿ World Understanding and Peace Dayಯನ್ನು ಇದೇ ದಿನ ಆಚರಿಸಲಾಗುತ್ತಿದೆ. ನಮ್ಮ ಕ್ಲಬ್ಬಿನ ವತಿಯಿಂದ ನಡೆಸಲಾದ ಈ ವಲಯ ಮಟ್ಟದ ಕಾರ್ಯಕ್ರಮ ಯುವ ಮೆರಿಡಿಯನ್‌ನ ಹೊರ ಸಭಾಂಗಣದಲ್ಲಿ ನಡೆಸಿ, ಎಲ್ಲಾ ರೀತಿಯಲ್ಲೂ ವಿನೂತನತೆಯನ್ನು ಮೆರೆಸಲಾಯಿತು. ಆಳ್ವಾಸ್ ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲಾ ಸಭಿಕರ ಮನಸೂರೆಗೈದಿತು. 5 ಜನ ಸಾಧಕರನ್ನು ಗುರುತಿಸಿ, ಗೌರವಿಸಿದ್ದು, ಸಮಾರಂಭಕ್ಕೆ ಮೆರುಗನ್ನೇ ತಂದುಕೊಟ್ಟಿತು. ಅತ್ಯುತ್ತಮವಾಗಿ ಈ ಕಾರ್ಯವನ್ನು ರೂಪಿಸಿದ ರೊ. ಮಹೇಂದ್ರ ಶೆಟ್ಟಿಯವರಿಗೆ, ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರಿಗೆ ಹಾಗೂ ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರಿಗೆ ಅಭಿನಂದನೆಗಳು.

**ರೊ. ಕೆ. ಟಿ. ಸುರೇಂದ್ರನಾಥ್:** ಕಳೆದ 35 ವರ್ಷಗಳಿಂದ ರೋಟರಿ ದಕ್ಷಿಣದ ಸದಸ್ಯನಾಗಿರುತ್ತೇನೆ. ಆದರೆ ನಾನು ಇಲ್ಲಿಯವರೆಗೆ ಇಂತಹ ಅದ್ಭುತವಾದ ಹಾಗೂ ಅಚ್ಚುಕಟ್ಟಾದ ಕಾರ್ಯಕ್ರಮ ರೋಟರಿಯಲ್ಲಿ ನಡೆದುದನ್ನು ಗಮನಿಸಿಲ್ಲ. ಒಂದು ಮಿನಿ ರೋಟರಿ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದಂತಹ ಅನುಭವವನ್ನು ಪಡೆದೆ. ಅದ್ಭುತವಾಗಿ ಆಲೋಚಿಸುವ ಹಾಗೂ ಕಾರ್ಯನಿರ್ವಹಿಸುವ ಯುವ ನಾಯಕರಾಗಿರುವ ರೊ. ಮಹೇಂದ್ರ ಶೆಟ್ಟಿ, ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸ ಹಾಗೂ ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರಿಗೆ ಉತ್ತಮ ಭವಿಷ್ಯ ಲಭಿಸಲಿ ಎಂದು ಹಾರೈಸುತ್ತೇನೆ.

**ರೊ. ಜೆರಾಲ್ಡ್ ಕ್ರಾಸ್ಟೊ :** Ultimate, Ultimate. ಒಂದು ಕಾರ್ಯಕ್ರಮವನ್ನು ಇದಕ್ಕಿಂತ ಒಳ್ಳೆಯದಾಗಿ ಕಲ್ಪಿಸಲು ಹಾಗೂ ಕಾರ್ಯರೂಪಕ್ಕಿಳಿಸಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮ ಕ್ಲಬ್ಬಿನ ಆತಿಥ್ಯದಲ್ಲಿ ಇಂತಹ Ultimate ಕಾರ್ಯಕ್ರಮವನ್ನು ರೂಪಿಸಿದ ರೊ. ಮಹೇಂದ್ರ ಶೆಟ್ಟಿಯವರ ಎದೆಗಾರಿಕೆಗಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

**ರೊ. ದೋಮ ಚಂದ್ರಶೇಖರ್ :** ಸುಂದರ ಸಮಾರಂಭವನ್ನು ಅನುಭವಿಸಿದೆ. ಆದರೆ ಮುಖ್ಯ ಅತಿಥಿಗಳು World Understanding and Peace Day ಎನ್ನುವ Subjectನಲ್ಲಿ ಇನ್ನೂ ಸ್ವಲ್ಪ ಜಾಸ್ತಿ ಮಾಹಿತಿಯನ್ನು ನೀಡಿದ್ದರೆ ಚೆನ್ನಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಬಹುಶಃ ಸಮಯ ಪಾಲನೆಗೆ ಆದ್ಯತೆ ನೀಡಿದರು ಅಂತ ಅನಿಸಿತು. ಸುಂದರ ಕಾರ್ಯಕ್ರಮವನ್ನು ಆಯ್ಕೆ ಮಾಡಿದುದಕ್ಕೆ ಅಧ್ಯಕ್ಷರಿಗೆ ಅಭಿನಂದನೆಗಳು.

**ರೊ. ಜಿ. ಶ್ರೀಧರ್ ಶೆಟ್ಟಿ :** ಅತ್ಯುತ್ತಮ ಸಾಧಕರನ್ನು ನಾವು ಗೌರವಿಸಿದ್ದೇವೆ. ಚಿಕ್ಕಮಗಳೂರಿನಲ್ಲಿ ನಾನು ಸರಕಾರಿ ಸೇವೆಯಲ್ಲಿದ್ದಾಗ ಶ್ರೀ ಕಿಶೋರ್ ಹೆಗ್ಡೆಯವರು ಸ್ಥಾಪಿಸಿದ್ದ ಸಂಸ್ಥೆಯ ಉದ್ಘಾಟನೆಯ ದಿನ ಅದು ಮುಂದುವರಿಯುವ ಬಗ್ಗೆ ಅನುಮಾನಿಸಿದ್ದೆ. ಆದರೆ ಒಬ್ಬ ವ್ಯಕ್ತಿ ಕಠಿಣ ಪರಿಶ್ರಮ ಹಾಗೂ ಬದ್ಧತೆಯಿಂದ ಕೆಲಸ ಮಾಡಿದ್ದಲ್ಲಿ ಹೇಗೆ ಯಶಸ್ವಿಯಾಗುತ್ತಾನೆ ಎನ್ನುವುದಕ್ಕೆ ಇಂದು ಆ ಸಂಸ್ಥೆ ವಾರ್ಷಿಕ 800 ಕೋಟಿ ರೂ. ಗಳ ವಹಿವಾಟು ನಡೆಸುತ್ತಿರುವುದನ್ನು ಕೇಳಿ ಶ್ರೀ ಕಿಶೋರ್‌ಹೆಗ್ಡೆಯವರ ಬಗ್ಗೆ ಅಭಿಮಾನ ಮೂಡುತ್ತಿದೆ. ಇಂದಿನ ಎಲ್ಲಾ ಸಾಧಕರು ಇಂತಹ ಅದ್ಭುತವಾದ ಸಾಧ್ಯತೆಗಳನ್ನು ಮಾಡಿದುದು ಅವರ ಪರಿಚಯದಲ್ಲಿ ತಿಳಿದು ಸಂತಸ ಪಟ್ಟೆ. ಒಳ್ಳೆಯ ಕಾರ್ಯಕ್ರಮವನ್ನು ರೂಪಿಸಿದ ರೊ. ಮಹೇಂದ್ರ ಶೆಟ್ಟಿಯವರಿಗೆ ಧನ್ಯವಾದಗಳು.

**ರೊ. ವಿವಿಯನ್ ಕ್ರಾಸ್ಟೊ :** ವೇದಿಕೆಯ ಸಹಾಯಕನ ಜವಾಬ್ದಾರಿ ಇದ್ದುದರಿಂದ ಸಭಾ ಕಾರ್ಯವನ್ನು ಗಮನಿಸಲು ಸಾಧ್ಯವಾಗಲಿಲ್ಲ. ಆದರೆ ಸಭೆಯ

ನಂತರ ಇತರ ಕ್ಲಬ್‌ಗಳ ಸದಸ್ಯರ ಅಭಿಪ್ರಾಯದಂತೆ ಈ ಕಾರ್ಯಕ್ರಮ ನಮ್ಮ ವಲಯ ಒಂದನ್ನು Next levelಗೆ ತೆಗೆದುಕೊಂಡು ಹೋಗಿದೆ. ಇಷ್ಟೊಂದು ಶಿಸ್ತುಬದ್ಧವಾದ ಕಾರ್ಯಕ್ರಮಗಳನ್ನು ಮಾಡಲು Metropolitan Cityಗಳಲ್ಲಿರುವ ಕ್ಲಬ್‌ಗಳಿಗೆ ಮಾತ್ರ ಸಾಧ್ಯವೆನ್ನುವ ಮಾತುಗಳನ್ನು ರೊ. ಮಹೇಂದ್ರ ಶೆಟ್ಟಿಯವರು ಸುಳ್ಳಾಗಿಸಿದ್ದಾರೆ. ವಲಯ ಒಂದನ್ನು ಉನ್ನತೀಕರಿಸಿದ ರೋಟರಿ ಕ್ಲಬ್ ಕುಂದಾಪುರ ದಕ್ಷಿಣಕ್ಕೆ ಎಲ್ಲರೂ ಅಭಿನಂದನೆಗಳನ್ನು ತಿಳಿಸಿರುತ್ತಾರೆ.

**ರೊ. ಭರತ್ ಶೆಟ್ಟಿ :** ನನ್ನಂತಹ ಯುವ ಜನರು ರೋಟರಿ ಕಡೆಗೆ ಆಕರ್ಷಿತರಾಗಬೇಕಾದರೆ ಇಂತಹ ಕಾರ್ಯಗಳನ್ನು ನೋಡಿ ಸ್ಫೂರ್ತಿಗೊಳ್ಳಬಹುದು. ಆಳ್ವಾಸ್ ಕಾಲೇಜಿನ ಮಕ್ಕಳು ನೀಡಿದ ಸಾಂಸ್ಕೃತಿಕ ಕಾರ್ಯದ ಮೂಲಕ ರೋಟರಿಯು ಕಲೆಗೆ ಪ್ರೋತ್ಸಾಹ ನೀಡಿದಂತಾಯಿತು. 5 ಸಾಧಕರನ್ನು ಗುರುತಿಸಿ ಗೌರವಿಸಿದುದರಿಂದ Community Service, Vocational Service ಮತ್ತು Youth Service ನಂತಹ Avenue ಗಳಲ್ಲೂ ಪ್ರೋತ್ಸಾಹ ನೀಡಿದಂತಾಯಿತು. ರೊ. ಮಹೇಂದ್ರ ಶೆಟ್ಟಿಯವರು ಕಳೆದ ಒಂದು ತಿಂಗಳಿನಿಂದ ತನ್ನ ಕುಟುಂಬದೆಡೆಗೆ ಗಮನ ನೀಡದೆ, ರೋಟರಿಗಾಗಿ ಕೆಲಸ ಮಾಡಿ ನಮ್ಮ ಕ್ಲಬ್ಬಿನ ಘನತೆಯನ್ನು ಹೆಚ್ಚಿಸಿದ್ದಾರೆ. ಅಭಿನಂದನೆಗಳು ಮಹೇಂದ್ರಣ್ಣ.

**ರೊ. ಮಹೇಂದ್ರ ಶೆಟ್ಟಿ :** ನನಗೆ ಕ್ಲಬ್ ಯಾವುದೇ ಕಾರ್ಯವನ್ನು ವಹಿಸಿದ್ದಲ್ಲಿ ಅದನ್ನು ರೋಟರಿ ಕುಂದಾಪುರ ದಕ್ಷಿಣದ ಘನತೆಗೆ ಸರಿಯಾಗಿ ಮಾಡಲು ತಾನು ಆದ್ಯತೆಯನ್ನು ನೀಡುತ್ತೇನೆ. ನಾನು ಹಿಂದೆ ನಿರ್ವಹಿಸಿದ ಎಲ್ಲಾ ಕಾರ್ಯಗಳೂ ಇದೇ ರೀತಿಯಲ್ಲಿ ಇದ್ದವು. ನನಗೆ ಯಾವುದೇ ನೀರಸವಾದ ಕಾರ್ಯಗಳನ್ನು ಮಾಡಲು ಬರುವುದಿಲ್ಲ. ಅಥವಾ ಕಾಟಾಚಾರಕ್ಕೆ ನಾನು ಯಾವುದೇ ಕಾರ್ಯಗಳನ್ನು ಮಾಡುವುದಿಲ್ಲ. ಯಾವುದೇ ದೊಡ್ಡ ಮಟ್ಟದ ಕಾರ್ಯಗಳನ್ನು ಮಾಡುವಾಗ ಜವಾಬ್ದಾರಿ ವಹಿಸಿದವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರೂ ಸಮಾನ ಮನಸ್ಕರಾಗಿ ಕೆಲಸ ಮಾಡಬೇಕಾಗುತ್ತದೆ. ಆದರೆ ದುರದೃಷ್ಟವಶಾತ್ ಇಂತಹ ಕಾರ್ಯಗಳಲ್ಲಿ ಸದಸ್ಯರು ಸಹಕರಿಸದೇ ಹೋದಲ್ಲಿ ಜವಾಬ್ದಾರಿಯನ್ನು ವಹಿಸಿ ಮುಂದೆ ಹೋದವರು ಮುಂದಿನ ದಿನಗಳಲ್ಲಿ ಜವಾಬ್ದಾರಿಯಿಂದ ಹಿಂದೆ ಸರಿಯಬಹುದು. ಆದುದರಿಂದ ಎಲ್ಲಾ ಸದಸ್ಯರೂ ರೋಟರಿಯ ಕಾರ್ಯಗಳನ್ನು ತಮ್ಮ ಕುಟುಂಬದ ಕಾರ್ಯದಂತೆ ಕಾರ್ಯವೆಸಗಲು ನಾನು ವಿನಂತಿಸುತ್ತೇನೆ.

**ರೊ. ಜುಡಿತ್ ಮೆಂಡೋನ್ಸಾ :** ಕಳೆದ ವಾರ ನಡೆದ ನಮ್ಮ ಕಾರ್ಯಕ್ರಮ ಅದ್ಭುತ ಯಶಸ್ಸಿನೆಡೆಗೆ ಸಾಗಿದೆ. ದೊಡ್ಡ ದೊಡ್ಡ ಕಾರ್ಯಕ್ರಮಗಳು ನಡೆಸುವಾಗ ತಿಳಿದೋ ತಿಳಿಯದೆಯೋ ಕೆಲವು ಲೋಪಗಳು ಸಂಭವಿಸಬಹುದು. ಆದರೆ ಮುಂಚೂಣಿಯಲ್ಲಿರುವವರು ತಾಳ್ಮೆಗೆಡದೇ ಮುಂದುವರಿದರೆ ಉತ್ತಮ ನಾಯಕರಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಆದಿಯಿಂದ ಅಂತ್ಯದವರೆಗೆ ಸಹಕರಿಸಿದ ರೊ. ಮಹೇಂದ್ರ ಶೆಟ್ಟಿಯವರಿಗೆ ಹಾಗೂ ಕ್ಲಬ್ಬಿನ ಎಲ್ಲಾ ಸದಸ್ಯರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನಂತರ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಕಾರ್ಯಕ್ರಮದ ರೂವಾರಿ ರೊ. ಮಹೇಂದ್ರ ಶೆಟ್ಟಿಯವರಿಗೆ ಎಲ್ಲರ ಸಮ್ಮುಖದಲ್ಲಿ ಗೌರವವನ್ನು ಸಲ್ಲಿಸಿದರು. ರೊ. ಜೆರಾಲ್ಡ್ ಕ್ರಾಸ್ಟೋರವರು ನಗೆಹನಿಯನ್ನು ಸಿಡಿಸಿದರು. ರೊ. ನಂದಾ ನಾಯಕ್‌ರವರು ಧನ್ಯವಾದವನ್ನು ಸಮರ್ಪಿಸಿದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಸಮಾಪ್ತಿಗೊಳಿಸಲಾಯಿತು.




**ಕಳೆದ ವಾರದ ಚಿಂತನೆ**

"ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ,
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ".

– ಜಿ ಎಸ್ ಶಿವರುದ್ರಪ್ಪ


(ನೀಡಿದವರು –ದೋಮ ಚಂದ್ರಶೇಖರ )

**Rotary Information**

**Mandatory Dist Events**

-Dist Assembly n Award Ceremony
-Asst Governors Training Seminar(AGTS)
-President Elect Training Seminar(PETS)
-Membership Development n Public Image Seminar
-The Rotary Foundation Seminar
-Dist Conference

**By Rtn. By K. K. Kanchan**



Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95


Rtn. K. T. Surendranath
1995-96


Rtn. B. C. Somayaji
1997-98


Rtn. S. Subraya Halambi
1999-2000


Rtn. K. Seetharama Nackathaya
2001-02


Rtn. Dr. Umesh Puthran
2003-04


Rtn. A. Shantharam Pai
2005-06

## ಭಾರ

ಭೂತಾಯಿಗೆ ಬೆಟ್ಟಗಳು ಭಾರವಲ್ಲ, ಅಗಸಕ್ಕೆ ಮೋಡಗಳು ಭಾರವಲ್ಲ. ಗರ್ಭಿಣಿಗೆ ಹೊಟ್ಟೆಯೊಳಗಿನ ಮಗುವು ಭಾರವಲ್ಲ, ಬಳ್ಳಿಗೆ ಕಾಯಿ ಭಾರವಲ್ಲ – ಆದರೆ ಇಂದು ಜನರಿಗೆ ಊಟ ಮುಗಿದ ಮೇಲೆ ಊಟ ಮಾಡಿದ ತಟ್ಟೆಯೇ ಭಾರ, ಮಳೆ ನಿಂತ ಮೇಲೆ ಛತ್ರಿಯೂ ಭಾರ, ಮಕ್ಕಳಿಗೆ ವೃದ್ಧರಾಗಿರುವ ಹೆತ್ತವರೇ ಭಾರ, ಅವಶ್ಯಕತೆ ಮುಗಿದ ಮೇಲೆ ಎಲ್ಲವೂ ಭಾರ ಭಾರ..

❖❖❖❖❖

## ಗೆಳೆಯ ಗೆಳೆತನ

ಮಿತೃತ್ವ ಹೇಗಿರಬೇಕು ಎಂದರೆ, ಮಿತ್ರನು ಸುಖ, ಸಂತೋಷ, ಸಂಪತ್ತುಗಳಿಂದ ಇರುವಾಗ, ಅವನಿಂದ ಆಹ್ವಾನ ಬಂದರೆ ಮಾತ್ರ ಹೋಗಬೇಕು. ಆದರೆ ಆತನು ಸಂಕಷ್ಟದಲ್ಲಿರುವಾಗ ಹಾಗೂ ಬಡತನದಲ್ಲಿದ್ದಾಗ ಅವನಿಂದ ಆಹ್ವಾನ ಬರದಿದ್ದರೂ ಹೋಗಬೇಕು. ಇದುವೇ ನಿಜವಾದ ಮಿತೃತ್ವ.

❖❖❖❖❖

ಕಟ್ಟಡವನ್ನು ಖರೀದಿಸಬಹುದು, ಆದರೆ ಒಳ್ಳೆಯ ಮನೆಯನ್ನಲ್ಲ. ಒಳ್ಳೆಯ ಮನೆಯನ್ನು ನಾವೇ ನಿರ್ಮಿಸಬೇಕು. ಹಾಗೆಯೇ ಜೀವನವನ್ನು ಪಡೆಯಬಹುದು. ಅಂತೆಯೇ ಸಾಧಾರಣ ಜೀವನವನ್ನು ಪಡೆಯಬಹುದು. ಅದರೆ ಒಳ್ಳೆಯ ಜೀವನವನ್ನು ನಾವೇ ರೂಪಿಸಿಕೊಳ್ಳಬೇಕು, ರೂಢಿಸಿಕೊಳ್ಳಬೇಕು.

## ಹುಟ್ಟುಹಬ್ಬದ ಶುಭಾಶಯಗಳು



ಪಿಪಿ. ರೊ. ವಿವಿಯನ್ ಕ್ರಾಸ್ತಾ
ದಿನಾಂಕ : ಮಾರ್ಚ್ 8
ಮೊಬೈಲ್ : 98455 63742

"Life is like riding a bicycle. To keep your balance, you must keep moving."
- Albert Einstein

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com



Rtn. S. Sadananda Chatra
1996-97


Rtn. K. Suresh Kamath
1998-99


Rtn. S. Vijaya Shetty
2000-01


Rtn. U. S. Shenoy
2002-03


Rtn. Dr. B. V. Udupa
2004-05


Rtn. K. Shantharam Prabhu
2006-07


Rtn. T. Raghavendra Hatwar
2007-08



Rtn. K. Shankar
2008-09



Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15



Rtn. P. Vasudeva Karanth
2015-16


Rtn. Aouzline F. Rebello
2016-17



Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24

*This Bulletin is sponsored by :*
Rtn. Sadananda Chatra
Mob. : 9740229999

For Private Circulation only